ಸೃಜನಿ
SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 157-161
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

ಜನಪದ ಗೀತೆಗಳಲ್ಲಿ ತವರಿನ ಬಾಂಧವ್ಯ ಸ್ವರೂಪ

ಸರಸ್ವತಿ ಡಿ. ಎಸ್
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ

Abstract:
ಈ ಲೇಖನವು ಜನಪದ ಗೀತೆಗಳಲ್ಲಿ ಅಭಿವ್ಯಕ್ತಗೊಂಡಿರುವ ತವರಿನ ಬಾಂಧವ್ಯದ ಸ್ವರೂಪ ಮತ್ತು ಮಹತ್ವವನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಕನ್ನಡ ಜನಪದ ಗೀತೆಗಳಲ್ಲಿ ಹೆಣ್ಣಿನ ತವರಿನ ಪ್ರೀತಿ, ತಂದೆ–ತಾಯಿ, ಸಹೋದರ–ಸಹೋದರಿಯರೊಂದಿಗಿನ ಆತ್ಮೀಯ ಸಂಬಂಧಗಳು ಹಾಗೂ ಬಾಲ್ಯದ ನೆನಪುಗಳು ಭಾವನಾತ್ಮಕವಾಗಿ ಮೂಡಿಬಂದಿವೆ. ವಿವಾಹದ ನಂತರ ಹೆಣ್ಣು ತನ್ನ ಗಂಡನ ಮನೆಗೆ ಹೋದರೂ ತವರಿನ ಮೇಲಿನ ಪ್ರೀತಿ, ಅಭಿಮಾನ ಮತ್ತು ಭಾವನಾತ್ಮಕ ಸಂಬಂಧಗಳು ನಿರಂತರವಾಗಿ ಉಳಿಯುತ್ತವೆ ಎಂಬುದನ್ನು ಜನಪದ ಗೀತೆಗಳು ಬಿಂಬಿಸುತ್ತವೆ. ತವರಿನ ಸುಖ–ದುಃಖ, ಹಬ್ಬ–ಹರಿದಿನಗಳು, ಕುಟುಂಬದ ಸಂಪ್ರದಾಯಗಳು ಮತ್ತು ಸಂಬಂಧಗಳ ಮಹತ್ವವನ್ನು ಜನಪದ ಹಾಡುಗಳು ಹೃದಯಸ್ಪರ್ಶಿಯಾಗಿ ಚಿತ್ರಿಸುತ್ತವೆ. ಒಟ್ಟಾರೆಯಾಗಿ, ಜನಪದ ಗೀತೆಗಳಲ್ಲಿ ತವರಿನ ಬಾಂಧವ್ಯವು ಹೆಣ್ಣಿನ ಭಾವನಾತ್ಮಕ ಬದುಕು, ಕೌಟುಂಬಿಕ ಮೌಲ್ಯಗಳು ಮತ್ತು ಕನ್ನಡ ಜನಪದ ಸಂಸ್ಕೃತಿಯ ಪ್ರಮುಖ ಅಭಿವ್ಯಕ್ತಿಯಾಗಿ ಗುರುತಿಸಲ್ಪಟ್ಟಿದೆ.

Keywords: *ಜನಪದ ಗೀತೆಗಳು, ತವರಿನ ಬಾಂಧವ್ಯ, ಕೌಟುಂಬಿಕ ಸಂಬಂಧಗಳು, ಸ್ತ್ರೀ ಸಂವೇದನೆ, ಜನಪದ ಸಂಸ್ಕೃತಿ*

ಪೀಠಿಕೆ

ಅನಾದಿ ಕಾಲದಿಂದಲೂ ನಮ್ಮ ಹಳ್ಳಿಯ ಸ್ತ್ರೀ ಪುರುಷರಿಂದ ಹಬ್ಬ ಹುಣ್ಣಿಮೆಗಳಲ್ಲಿ, ಮದುವೆ, ಕಾಯಕ, ಕ್ರೀಡೆಗಳಲ್ಲಿ, ಸುಖ ದುಃಖಗಳಲ್ಲಿ, ಜೀವನದ ನಾನಾ ಘಟನೆಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕ ಹಾಗೆ ರಾಗ, ರೂಪಗಳನ್ನು ಪಡೆದು ಹುಟ್ಟಿದ ಜನವಾಣಿಗಳೇ ಜನಪದ ಗೀತೆಗಳು. ಅಂದರೆ ಜನಪದರಿಂದ ಸೃಷ್ಟಿಯಾದವು ಜನಪದ ಗೀತೆಗಳು. ಇವು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸೃಷ್ಟಿಯಾಗಿವೆ. ಹೇಗೆ ಹುಟ್ಟಿದರೂ ಸಾಮೂಹಿಕವಾಗಿ ಬೆಳೆದು ಮುಂದುವರಿಯುತ್ತವೆ. ಸಮೂಹದ ನಡುವೆ ಉಸಿರಾಡುವುದು ಜನಪದ ಗೀತೆಯ ಮುಖ್ಯ ಲಕ್ಷಣ. ಕಾಯಕದ ಹಿನ್ನೆಲೆಯಲ್ಲಿ ಹುಟ್ಟುವ ಜನಪದ ಗೀತೆಗಳೇ ಹೆಚ್ಚು. ಕಾಯಕಕ್ಕೂ ಜನಪದ ಗೀತೆಗೂ ಬಿಡಿಸಲಾಗದ ನಂಟು. ಇವು ಜನಪದ ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಸಾವಿರಾರು ವರ್ಷಗಳಿಂದ ಜನಪದರ ಬದುಕು ಬವಣೆಯ ಹಾಸುಹೊಕ್ಕಾಗಿ ಹರಿದುಬಂದಿವೆ. ಜನಪದ ಗೀತೆಗಳಿಂದ ಜನಪದ ಸಂಸ್ಕೃತಿ, ಬದುಕು, ಜೀವನ ಪ್ರೀತಿಯನ್ನು ಅರಿಯಬಹುದು.

ಜನಪದ ಗೀತೆಗಳಲ್ಲಿ ಹಳ್ಳಿಯ ಹೆಂಗಸರ ದನಿ ಎದ್ದು ಕಾಣುತ್ತದೆ. ಮಾನವ ಜೀವನದಲ್ಲಿ ಸ್ತ್ರೀ ಕೇಂದ್ರ ಬಿಂದು ಅವಳಿಂದಲೇ ಸಂಸಾರ, ಸಂತಾನ, ಸಮೃದ್ಧಿ,

Please cite this article as: *ಸರಸ್ವತಿ, ಡಿ.ಎಸ್. (2026). ಜನಪದ ಗೀತೆಗಳಲ್ಲಿ ತವರಿನ ಬಾಂಧವ್ಯ ಸ್ವರೂಪ. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್, 5(1), 157–161*

ನಲಿವು ಒಲವು, ಎಲ್ಲ. ಮಗು, ಮಗಳು, ಅಕ್ಕ ತಂಗಿ, ಸೊಸೆ, ಸವತಿ, ಹೆಂಡತಿ, ತಾಯಿ, ಅಜ್ಜಿ, ಗೆಳತಿ, ಹೀಗೆ ನಾನಾ ಘಟ್ಟಗಳಲ್ಲಿ ಸ್ತ್ರೀ ಸುಖಜೀವನ ಜೀವತಂತುವಾಗಿದ್ದಾಳೆ. ಸಂಸಾರ ಸೂತ್ರವಾಗಿದ್ದಾಳೆ. ಬಂಧುತ್ವ ವಿವಿಧ ಸಂಬಂಧದಿಂದ ಕೂಡಿದೆ. ಬಂಧುತ್ವದ ಬೇರು ಬದುಕಿನ ವೃಕ್ಷಕ್ಕೆ ಆಧಾರವಾಗಿ ಎಲ್ಲ ಕಡೆ ಹರಡಿಕೊಂಡಿದೆ. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಬಂಧುತ್ವದ ಕೊಂಡಿಯಾಗಿರುತ್ತಾರೆ. ಜೀವನದಲ್ಲಿ ಕಾಣುವ ಬಾಂಧವ್ಯದ ನಾನಾ ಮುಖಗಳಲ್ಲಿ ಸ್ತ್ರೀಯರದ್ದೇ ಪ್ರಮುಖ ಪಾತ್ರವಿರುವುದು ಸ್ಪಷ್ಟ.

ಸ್ತ್ರೀಯನ್ನು ಕುರಿತು ಹೆಚ್ಚು ಗೀತೆಗಳು ಸೃಷ್ಟಿಯಾಗಿವೆ ಎಂಬುದರಿಂದ ಇವು ಕೇವಲ ಸ್ತ್ರೀಯರಿಂದಲೇ ರಚನೆಯಾಗಲಿವೆ ಎನ್ನಲು ಸಾಧ್ಯವಿಲ್ಲ. ಬದುಕಿನ ಬಾಂಧವ್ಯವೇ ಮೊದಲು. ನಾನಾ ಸಂಬಂಧಗಳು, ಅನುಭವಗಳು ಸ್ತ್ರೀಯರಿಗೆಂತೋ ಅಂತೆಯೇ ಪುರುಷರಿಗೂ ಸಹಜವಾಗಿವೆ. ಆದ್ದರಿಂದ ಮೃದು ಮಧುರ ಮನಸ್ಸಿನ ಸಹೃದಯ ಸ್ತ್ರೀ ಪುರುಷರಿಂದ ಜನಪದ ಗೀತೆಗಳು ಸೃಷ್ಟಿಯಾಗಿವೆ ಎಂದು ಭಾವಿಸುವುದು ಸೂಕ್ತ.

ಜನಪದ ಗೀತೆಗಳ ಸೊಗಸನ್ನು ಮನಮುಟ್ಟಿ ಸವಿಯಲು ನಾವು ಮಹಾಕವಿಗಳ ಉದ್ಗ್ರಂಥಗಳನ್ನು ಅಭ್ಯಸಿಸುವ ಜಾಡನ್ನೂ ಅದೇ ಮಟ್ಟದಲ್ಲಿ ಅಳೆಯುವ ಉದ್ಧಟತನವನ್ನೂ ಬಿಟ್ಟು ನಮ್ಮ ಹಳ್ಳಿಯ ಸ್ತ್ರೀ ಪುರುಷರ ಸರಳ, ಸುಭಗ, ಸುಂದರ, ಸಹಜ ಹಾಗೂ ಔದಾರ್ಯಮಯವಾದ ಜೀವನದ ಸ್ವಂತಿಕೆಯ ನಿಲುವಿಗೆ ನಾವು ಗಮನ ಕೊಡಬೇಕು. ಆಗಲೇ ಈ ಗೀತೆಗಳ ನಿಜವಾದ ತಿರುಳು ಗೋಚರಿಸುವುದು.

ಜನಪದ ಗೀತೆಗಳಲ್ಲಿ 'ತಾಯಿ', 'ತವರು', 'ತವರಿನ ಸಂಬಂಧಗಳು' ಇವುಗಳೊಂದಿಗೆ ಹೆಣ್ಣುಮಗಳ ಬಾಂಧವ್ಯವನ್ನು ಅದರ ನಾನಾ ಮುಖಗಳನ್ನು ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶವಾಗಿದೆ.

ಜೀವನವೇ ಕಾವ್ಯ ಎಂದು ಸಾರುವ ಜನಪದ ಗೀತೆಗಳಲ್ಲಿ ತಾಯಿಗಿರುವ ಸ್ಥಾನ ಅನುಪಮವಾದುದು. ಜೀವನದ ನಾನಾ ಘಟ್ಟಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸುವ ತಾಯಿ ನಿಜವಾಗಿಯೂ ಆದಿಮಾಯೆಯೇ. ತಾಯಿಗೆ ಸರಿಗಟ್ಟುವ ಮತ್ತೊಂದು ಈ ಜಗತ್ತಿನಲ್ಲಿದೆಯೇ? ಹೆಣ್ಣು ಮಕ್ಕಳಿಗೆ ತಾಯಿ ಹೇಗೆ ಸರ್ವಸ್ವವೋ ತವರೂ ಅಷ್ಟೇ ಪ್ರಧಾನವಾದುದು. ತಾಯಿ ಬೇರೆಯಲ್ಲ ತವರು ಬೇರೆಯಲ್ಲ ಸಕಲ ಆಶ್ರಯಗಳನ್ನು ನೀಡುವ ಭಾಗ್ಯ ಎರಡು ಮುಖಗಳು ತಾಯಿ ಮತ್ತು ತವರು.

ಬ್ಯಾಸಗಿ ದಿವಸಕ ಬೇವೂನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ / ಹಡದಮ್ಮ
ನೀ ತಂಪ ನನ್ನ ತವರೀಗ

ಈ ಜನಪದ ತ್ರಿಪದಿ ತಾಯಿಯ ಮಹತ್ವವನ್ನು ಎಷ್ಟೊಂದು ಸರಳವಾಗಿ, ಸೊಗಸಾಗಿ ಚಿತ್ರಿಸಿದೆ. ಇಂತಹ ಬಾಂಧವ್ಯದ ಮೂಲತಂತುವಾದ ತಾಯಿಯನ್ನು ಯಾರು ತಾನೆ ಕಳೆದುಕೊಳ್ಳುತ್ತಾರೆ? ತಾಯಿಯಿಲ್ಲದ ತವರು ನರಕ ಸದೃಶವಾದುದು. ಹಾಗಾಗಿಯೇ ಎಲ್ಲ ಹೆಣ್ಣು ಮಕ್ಕಳೂ ಕೂಡ ತಾಯಿಯ ತವರಿನ ಬಾಂಧವ್ಯವನ್ನು ಉಳಿಸಿಕೊಳ್ಳುತ್ತಾರೆಯೇ ಹೊರತು ಮರೆಯುವುದಿಲ್ಲ; ಮುರಿಯುವುದಿಲ್ಲ. ಯಾಕೆಂದರೆ: 'ಅಕ್ಕ ಇದ್ದರೆ ಭಾವ, ರೊಕ್ಕ ಇದ್ದರೆ ಸಂತೆ, ಮಕ್ಕಳಿದ್ದರೆ ಮನಿಮಾರ' ಹಾಗೆಯೇ ಹಡದವ್ವ ಇದ್ದರೆ ಮಕ್ಕಳಿಗೆ ಸಾಮ್ರಾಜ್ಯವಿದ್ದಂತೆ. ಮಕ್ಕಳ ನಡುವೆ ಹೃದಯದ, ರಕ್ತದ, ಭಾವದ ಸಂಬಂಧವಿದೆ. ಅವರು ಯಾವಾಗಲೂ ಅನ್ಯೋನ್ಯವಾಗಿರಲು ಬಯಸುತ್ತಾರೆ. ಇದಕ್ಕೆ ಸೃಷ್ಟಿಯ ನಿಯಮವೇ ಪೋಷಕವಾಗಿದೆ. ನಮಗೆ ಜನ್ಮವಿತ್ತ ತಾಯಿ ಸಾಮಾನ್ಯಳಲ್ಲ ತಾಯಿಯ ರಕ್ತಮಾಂಸಗಳಿಂದಲೇ ನಮ್ಮ ಮೈ ಸಿದ್ಧವಾಗಿರುತ್ತದೆ. ಆಕೆಯು ನಮ್ಮನ್ನು ವ್ಯಕ್ತಿಯಾಗಿ ನಿಲ್ಲುವಂತೆ ಮಾಡಿದ್ದಾಳೆ.

ಕಣ್ಣೆಂಜಲ ಕಾಡಿಗಿ ಬಾಯೆಂಜಲ ವೀಳ್ಯವ
ಯಾರೆಂಜಲುಂಡಿ ನನ ಮನವೆ / ಹಡೆದವ್ನ
ಬಾಯೆಂಜಲುಂಡು ಬೆಳೆದೇನ

ಹಡೆದವ್ವನ ವಿಷಯದಲ್ಲಿ ಎಂಜಲಿಲ್ಲ ಎನ್ನುವ ಲೋಕಸತ್ಯವನ್ನು ಜನಪದ ಗೀತೆ ಸ್ಪಷ್ಟ ಪಡಿಸಿದೆ. ತಾಯಿ ಮಕ್ಕಳಲ್ಲಿ ಸರ್ವವಿಧವಾದ ಬಾಂಧವ್ಯವನ್ನು ಊರ್ಜಿತವಾಗಿ ನಿಲ್ಲಿಸುವ ತಾಯಿಯನ್ನು ಕುರಿತು ಜನಪದರು ಮನಃಪೂರ್ವಕವಾಗಿ ಹಾಡಿದ್ದಾರೆ.

ತಾಯಿ ತವರುಗಳೊಡನೆ ಒಂದಾಗಿ ಹೊಂದಿಕೊಂಡು ಮಕ್ಕಳು ಬಾಳುತ್ತಿರುವಾಗ ವಯೋಧರ್ಮ ಹಾಗೂ ಸಾಮಾಜಿಕ ನಿಯಮಗಳಿಗನುಗುಣವಾಗಿ ಹೆಣ್ಣು ಮಕ್ಕಳು ತಾಯಿ, ತವರು, ತಂದೆ, ಬಂಧು–ಬಳಗವನ್ನು ಬಿಟ್ಟು ಗಂಡನ ಮನೆಗೆ ಹೋಗುವಾಗ ಹೃದಯ ಹಿಂಡುವ ಸನ್ನಿವೇಶ ಬರುತ್ತದೆ. ಇವು ಅನಿವಾರ್ಯವಾದರೂ ಅಂತಃಕರಣ ಮಿಡಿಯುವ ಪ್ರಸಂಗಗಳು. ಇಂಥ ಸನ್ನಿವೇಶಗಳ ಅಭಿವ್ಯಕ್ತಿಗೆ ನಮ್ಮ ಜನಪದ ಕವಿಗಳು ಪ್ರಧಾನ ಸ್ಥಾನಕೊಟ್ಟಿದ್ದಾರೆ. ಇಂಥ ಪ್ರಸಂಗಗಳನ್ನು ಕಣ್ಣಾರೆ ಕಂಡು, ತಾವೂ ಪಾತ್ರಧಾರಿಗಳಾಗಿ ನಿಂತು, ಅನುಭವಿಸಿ ಎಂಥವರಿಗಾದರೂ ಕಣ್ಣು ತುಂಬಿ ಬರುವಂತೆ ನಾನಾ ರೀತಿಯಾಗಿ ಭಾವಾವೇಶಗೊಂಡು ಹಾಡಿದ್ದಾರೆ. ಮನುಷ್ಯ ಭಾವಾವೇಶಗೊಂಡಾಗ ಅವನ ನುಡಿ ಲಯಬದ್ಧವಾಗುವುದೆಂಬುದಕ್ಕೆ ಇಂಥ ಸಂದರ್ಭಗಳು ಜ್ವಲಂತ ಉದಾಹರಣೆಗಳಾಗಿವೆ. ಈ ಹೊತ್ತಿಗೂ ಅತ್ಯಂತ ಜನಪ್ರಿಯ ಮತ್ತು ಎಲ್ಲರ ಬಾಯಿಯಲ್ಲೂ ಜನಜನಿತವಾಗಿ ಬರುವ ಈ ಜನಪದ ಗೀತೆಯಿಂದ ತವರಿನ ಬಾಂಧವ್ಯ ಎಂಥಹದ್ದು ಎಂಬುದು ಅರ್ಥವಾಗುತ್ತಿದೆ. ತವರನ್ನು ಬಿಟ್ಟು ಗಂಡನ ಮನೆಗೆ ಹೋಗುವ ಸನ್ನಿವೇಶ ಎಂಥವರನ್ನು ಮನಕಲಕುವಂತಿದೆ. ಮದುವೆಯಾದ ಮಗಳಿಗೆ ಮಗುವಾಗುವವರೆಗೂ ತವರಿನ ಜವಾಬ್ದಾರಿಯೂ ಹೆಚ್ಚಾಗಿರುತ್ತದೆ. ಮಗುವಾಗಿ ಬಾಣಂತನ ಮುಗಿಸಿ ತನ್ನ ಗಂಡನ ಮನೆಗೆ ಹೋಗುವ ಹೆಣ್ಣು ಮಗಳಿಗೆ ಅಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಹಕ್ಕು ದೊರಕುವುದು ಎಂಬ ವಿಷಯವು ಈ ಜನಪದ ಗೀತೆಯಲ್ಲಿ ಸೇರಿಕೊಂಡಿದೆ. ಆಕೆಯೊಂದಿಗೆ ನೀಡುವ ತೊಟ್ಟಿಲು ಮತ್ತು ಎಮ್ಮೆ ಅವರ ತವರಿನ ಶ್ರೀಮಂತಿಕೆಯ ಪ್ರತೀಕ ಮತ್ತು ಒಕ್ಕಲುತನದ ಮುಂದುವರಿಕೆಯೂ ಆಗುತ್ತದೆ.

ತೊಟ್ಟಿಲ ಹೊಡ್ಕೊಂಡು ತವರುಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು / ತೌರೂರ
ತಿಟ್ಟತ್ತಿ ನಿಂದು ನೋಡ್ಯಾಳೋ.

ಈ ಜನಪದ ತ್ರಿಪದಿಯ ಪದ್ಯಕ್ಕೆ ಅದರೊಳಗಿನ ಬಾಂಧವ್ಯಕ್ಕೆ ಎಷ್ಟು ಬರೆದರೂ ಅದು ಕಡಿಮೆಯೆ. ಎತ್ತರವಾದ ಜಾಗದಲ್ಲಿ ನಿಂತು ಆಕೆ ನೋಡಿದ್ದು ತವರು ಮನೆಯನ್ನಲ್ಲ. ತವರಿನ ಊರನ್ನು ಅಥವಾ ಇಡೀ ತವರನ್ನು. ಹೆಣ್ಣು ಮಗಳ ಹೃದಯ ಅತ್ಯಂತ ಭಾರವಾಗಿದೆ ಆ ಮನಸ್ಥಿತಿಯಲ್ಲಿ ಆಕೆ ತನ್ನ ಗಂಡನ ಮನೆಯನ್ನು ಬೆಳಗಲು ಮತ್ತು ತನ್ನ ತವರಿನ ಹೆಸರು ಅಥವಾ ಕೀರ್ತಿಯನ್ನು ಹೆಚ್ಚಿಸಲು ಬದ್ಧಳಾಗಿ ಹೊರಟಿರುವ ಸನ್ನಿವೇಶ ಎಂತಹವರನ್ನು ಭಾವುಕರನ್ನಾಗಿಸುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಭಾವುಕಳಾಗಿ ನಿಂತಿರುವ ಹೆತ್ತ ತಾಯಿಯನ್ನು ಆಕೆ ಸಮಾಧಾನ ಪಡಿಸುವ ರೀತಿಯನ್ನು ಇಲ್ಲಿ ವಿವರಿಸಿದ್ದೇನೆ. ತನ್ನ ಕರುಳ ಕಂದನನ್ನು ಗಂಡನ ಮನೆಗೆ ಕಳುಹಿಸಿಕೊಡುವಾಗ ಹೆತ್ತ ತಾಯಿಗೆ ಸಹಜವಾಗಿಯೇ ದುಃಖವಾಗುತ್ತದೆ. ಅದು ಸಹಿಸಲು ಸಾಧ್ಯವಾಗದ ವೇದನೆ. ಅಂಥ ಸಮಯದಲ್ಲಿ ಕೆಲವು ಬಾರಿ ಮಗಳೇ ವಿವೇಕಿಯಾಗಿ ಮತ್ತು ಧೈರ್ಯವಾಗಿ ವರ್ತಿಸಿ ತಾಯಿಗೆ ತಾನೇ ಸಾಂತ್ವನ ಹೇಳಿದ್ದಾಳೆ.

ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾಗಿ
ನಾಹುಟ್ಟಿ ಮನೆಗೆ ಎರವಾದೆ / ಹಡೆದವ್ವ
ನೀ ಕೊಟ್ಟ ಮನೆಗೆ ಹೆಸರಾದೆ.

ಹೆಣ್ಣು ಮಕ್ಕಳಿಗೆ ಅವರಿದ್ದ ತವರು, ತವರಿನೊಂದಿಗಿದ್ದ ಬಾಂಧವ್ಯ, ಅವರು ತವರನ್ನು ಬಿಟ್ಟು ಗಂಡನ ಮನೆಗೆ ಹೋದಾಗ ಸಾಮೀಪ್ಯ

ಕಡಿಮೆಯಾಗುವುದರಿಂದ ಮತ್ತೆ ಮತ್ತೆ ತವರಿನ ಬಾಂಧವ್ಯ ಬಲಗೊಳ್ಳುತ್ತದೆ.

ಆಕಳ ಕರು ಬಂದು ಅಂಬ ಅಂಬ ಎಂದು
ತಮ್ಮವ್ವನ ಮೊಲಿಯ ನಲಿನಲಿದು / ಉಂಬಾಗ
ನಮ್ಮವ್ವನ ಧ್ಯಾನ ನನಗಾಗಿ.

ಹೀಗೆ ಗಂಡನ ಮನೆಯಲ್ಲಿದ್ದು, ಕಾಯಕವನ್ನು ನಿರ್ವಹಿಸುವಾಗ ಪ್ರತಿ ಸನ್ನಿವೇಶಗಳಲ್ಲಿಯೂ ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ – ಹೀಗೆ ಎಲ್ಲ ಸಂಬಂಧಗಳನ್ನು ನೆನೆಪಿಸಿಕೊಳ್ಳುತ್ತಲೇ ಇರುತ್ತಾಳೆ. ತನ್ನ ಗಂಡನ ಮನೆಯಲ್ಲಿ ಎಂಥಹ ಶ್ರೀಮಂತಿಕೆ ಇದ್ದರೂ ಪ್ರೀತಿ ಇದ್ದರೂ ಸಹ ಆಡಿ ಬೆಳೆದ ಮನೆ, ತಿಂದುಂಡ ಪರಿಸರವನ್ನು ಮತ್ತೆ ಮತ್ತೆ ನೆನೆಪಿಸಿಕೊಳ್ಳುತ್ತಲೇ ಇರುತ್ತಾಳೆ. ಅವಳ ತವರಿನ ಬಗೆಗಿನ ಅಧಮ್ಯವಾದ ಪ್ರೀತಿ ಈ ಜನಪದ ಗೀತೆಯಲ್ಲಿ ಅಡಗಿದೆ.

ಹಾಲುಂಡ ತವರೀಗೆ ಏನೆಂದು ಹಾಡಲೆ
ಹೊಳೆದಂಡಿಲಿರುವ ಕರಕೀಯ / ಕುಡಿಯಂಗ
ಹಬ್ಬಲೇ ಅವರ ರಸಬಳ್ಳಿ.

ಈ ಈ ಒಂದು ತ್ರಿಪದಿಯೇ ಸಾಕು. ಆಕೆ ತವರಿನ ಬಗೆಗೆ ಹೊಂದಿರುವ ಬಾಂಧವ್ಯವನ್ನು ವಿವರಿಸಲು. ಶ್ರೀಮಂತಿಕೆಯಲ್ಲೇ ಅತ್ಯಂತ ದೊಡ್ಡದಾದ ಈ ಹೃದಯ ಶ್ರೀಮಂತಿಕೆ ಇರುವುದನ್ನು ವಿವರಿಸಲು ಈ ಸಾಲುಗಳು ಉದಾಹರಣೆಯಾಗುತ್ತವೆ. ತವರಿನ ಬಗೆಗೆ ಮಾತನಾಡುತ್ತಾ ಆಕೆ ಹಾರೈಸುವ ಈ ಸಾಲು "ತನ್ನ ತವರು ಸದಾ ಕಾಲಕ್ಕೂ ಹಸಿರಾಗಿರಲಿ ಎನ್ನುವುದನ್ನು ಹೊಳದಂಡೆಯಲ್ಲಿರುವ ಗರಿಕೆಯ ಚಿಗುರಿನಂತೆ ಹಬ್ಬಲಿ ಅವರ ವಂಶ" ಎನ್ನುತ್ತಾಳೆ. ಹೊಳೆ ಶಾಶ್ವತ ಜಲದ ತಾಣ ಎಂದಿಗೂ ಇಲ್ಲಿ ಹಸುರೇ ಇರುತ್ತದೆಯೇ ಹೊರತು ಒಣಗುವುದಿಲ್ಲ. ಅಂತೆಯೇ ನನ್ನ ತವರಿನ ಮನೆ ಮತ್ತು ಅವರ ವಂಶವು ರಸಬಳ್ಳಿಯಂತೆ ಮುಂದುವರೆಯಲಿ ಎಂದು ಹಾರೈಸಿದ್ದಾಳೆ.

ತಾಯಿ, ತಂದೆ. ತವರನ್ನು ನೆನಪಿಸಿಕೊಳ್ಳುವಂತೆಯೇ ತನ್ನ ಅಣ್ಣ, ತಮ್ಮಂದಿರನ್ನು ಹಾಗೆ ನೆನಪಿಸಿಕೊಳ್ಳುತ್ತಾಳೆ.

ಗಂಧವ ಹಚ್ಯಾವ ಗಾಳೀಗಿ ನಿಂತಾನ
ಒಂದೊಂದು ಹೇಳಿ ನಗತಾನ / ನನ್ನ ತಮ್ಮ
ಭಿಂಗ್ಯಾರಾಟೆಲ್ಲ ಕಲಿತಾನ.

ಎಂದು ತನ್ನ ಕಿರಿಯ ತಮ್ಮನ ಬಗೆಗೆ ಚಿತ್ರಿಸಿರುವ ಈ ಗೀತೆಯಲ್ಲಿ ಅವನ ಬೆಡಗು, ಹಾಸ್ಯ ಪ್ರವೃತ್ತಿ, ರಸಿಕತನ ಎಲ್ಲವೂ ವ್ಯಕ್ತವಾಗಿದೆ.

ಎಂದು ಇಲ್ಲದ ನನ್ನ ಎಡಗಣ್ಣ ಹಾರೀತ
ಚೆಂದರ ಹುಬ್ಬ ಕುಡಿಬೆಳಕ / ನನ್ನ ತಮ್ಮ
ಸಂಜಿಗ್ಹಡೆದವ್ನ ಮಗ ಬಂದ್ನ.

ಎನ್ನುವ ಜನಪದ ಗೀತೆಯಲ್ಲಿ ಈ ಮುನ್ಸೂಚನೆಗಳು ಇಂದಿಗೂ ಜನಜೀವನದಲ್ಲಿ ಪ್ರಚಲಿತದಲ್ಲಿವೆ. ಏನೇ ಆದರೂ ಹೆಣ್ಣು ಮಗಳು ನೆನಪಿಸಿಕೊಳ್ಳುವುದೇ ತನ್ನ ತವರನ್ನು. ಹಾಗೆಯೇ ಇಲ್ಲಿಯೂ ಎಡಗಣ್ಣು ಕುಣಿಯವುದಕ್ಕೂ, ಸಂಜೆ ತನ್ನ ಸೋದರ ಬರುವುದಕ್ಕು ಸಂಬಂಧಿಸಿ ನೆನಪಿಸಿ ಕೊಳ್ಳುತ್ತಾಳೆ. ತಮ್ಮ ಅಥವಾ ಅಣ್ಣ ಹೆಣ್ಣುಮಕ್ಕಳ ದೃಷ್ಟಿಯಲ್ಲಿ ತಮ್ಮ ತವರಿನ ಧಣಿಯಾಗಿ ಇರುತ್ತಾರೆ.

ಅಣ್ಣನಂತೂ ತಂದೆಯ ಮತ್ತೊಂದು ರೂಪ. ತಮ್ಮನ ಬಗೆಗೆ ಕುಚೋದ್ಯ ಮಾಡುವಂತೆ ಅಣ್ಣನ ಬಗೆಗೆ ಗೌರವ ಹೆಚ್ಚು. ಅವನ ದುಡಿಮೆ, ಸೌಂದರ್ಯ, ದೃಢತೆ ಇವುಗಳನ್ನು ಕುರಿತಂತೆ–

ಕಬ್ಬು ಕಾರುಳ್ಳವನೆ ಹುಬ್ಬು ನೇರುಳ್ಳವನೆ
ಗೊಬ್ಬರದ ಗಾಡಿ ಹೊಡೆಯುವನೆ / ಅಣ್ಣಯ್ಯನ
ಹುಬ್ಬಿಗಿನ್ನೊಂದು ಸರಿಯುಂಟೇ.

ಎಂಬ ಜನಪದ ತ್ರಿಪದಿಯು ಅವನ ಸಂಮೃದ್ಧವಾದ ಒಕ್ಕಲುತನವನ್ನು, ಕಷ್ಟಪಟ್ಟಿ ಮೈಮುರಿದು ವ್ಯವಸಾಯ ಮಾಡುವುದನ್ನು, ದೃಢಕಾಯ ಹೊಂದಿರುವುದನ್ನು ಹೊಗಳುವಾಗ ತಂಗಿಗೆ ಅಣ್ಣನೇ ಪ್ರಮುಖ. ಇಂಥಹ ಅಣ್ಣನಿಗೆ ಸರಿಸಮಾನರಾದವರು ಯಾರು ಇಲ್ಲ ಎಂಬುದು

ಮನವರಿಕೆಯಾಗಿದೆ. "ಸರಿಯುಂಟೇ"? ಎಂದು ಸವಾಲನ್ನೇ ಒಡ್ಡಿರುತ್ತಾಳೆ.

ಇಂತಹ ಅಣ್ಣ ಮದುವೆಗೆ ಮೊದಲು ಅವನ ಬರುವಿಕೆಗಾಗಿಯೇ ಎದುರು ನೋಡುತ್ತಾ ಬಾರದಿದ್ದನ್ನು ಗಮನಿಸಿ ಹಲವು ಕಳವಳ, ಗೊಂದಲಗಳನ್ನು ಅನುಭವಿಸುತ್ತಾ – ಅವನು ತನ್ನ ಜೊತೆಗೆ ಊಟ ಮಾಡಬೇಕು ಎಂದು ಹಂಬಲಿಸುವ ಪ್ರಸಂಗವನ್ನು

ತೋಟಕ ಹೋದಣ್ಣ ಊಟಕ್ಕ ಬರಲಿಲ್ಲ
ತೋಟದ ಹೂವ ತಲಿತುಂಬ / ಇಟಗೊಂಡು
ಊಟದ್ಹಂಬಲ ಮರೆತಾನ.

ಎನ್ನುತ್ತಾಳೆ. ಇದು ಇಂದಿಗೂ ನಮ್ಮ ಹಳ್ಳಿಗಳಲ್ಲಿರುವ ಜೀವಂತ ಚಿತ್ರ. ಇದೇ ರೀತಿಯ ಬಾಂಧವ್ಯವು ತಾನು ಮದುವೆಯಾಗಿ ಗಂಡನ ಮನೆಗೆ ಹೋದಾಗಲು, ತನ್ನ ತವರಿಗೆ ಅಣ್ಣನ ಅರಸಿ ಅತ್ತಿಗೆ ಬಂದಾಗಲು ಹಾಗೆ ಮುಂದುವರೆಯುತ್ತದೆ.

ಅತ್ತಿಗೆಯ ಅರಸೇನ ತಾಯಿ ಕುಮಾರೇನ
ಮಕ್ಕಳಿಗಿ ಮಾವ ನನಗಣ್ಣ / ಬಂದರ
ನಿಚ್ಚ ದೀವಳಿಗಿ ಮನಿಯಾಗ

ಬೆಳಕಿನ ಪ್ರತೀಕ ದೀಪಾವಳಿ. ತನ್ನ ಜೀವನದಲ್ಲಿ ನಿತ್ಯ ದೀವಳಿಗೆಯನ್ನು ಆಚರಿಸಿದ ಸಂಭ್ರಮ ಅಣ್ಣನು ಸಹ ತಂಗಿಗೆ 'ತನ್ನನ್ನು ದೀವಳಿಗೆಗೆ ಕರೆಯೋದ ಮರೀಬ್ಯಾಡ ಎನ್ನುತ್ತಾನೆ'.

ಅಕ್ಕ ಪಕ್ಕದ ಮನೆಗಳಲ್ಲಿ ವಾಸವಿದ್ದು ಜೊತೆಯಾಗಿ ಎಲ್ಲ ಸಂತೋಷ, ದುಃಖಗಳನ್ನು ಅನುಭವಿಸಿದ ಹೆಣ್ಣು ತನ್ನ ಗಂಡನ ಮನೆಗೆ ಹೋಗುವಾಗ ಅಥವಾ ಹೋದ ನಂತರದಲ್ಲಿ ತನ್ನೊಡನಿದ್ದ ಗೆಳತಿಯನ್ನು ಕುರಿತು ಹೀಗೆ ಹೇಳಿದ್ದಾಳೆ.

ನಿಮ್ಮ ಹಂಬಲ ನಾನ್ಯಾಕೆ ಮರತೇನು
ಕರಸುವೆ ಮಗನ ಮದುವೆಗೆ / ಗೆಣೆಕಾತಿ
ಉಡಿಸುವೆ ಸೀರೆ ರವಿಕೆಯ.

ಎಂದಾದರೊಮ್ಮೆ, ಒಂದು ದಿನ ಮತ್ತೆ ಕೂಡುವ, ಎರಡು ಮನಸ್ಸುಗಳಲ್ಲೂ ಮಾತಾಡಿಕೊಳ್ಳುವ, ಆಶಾಭಾವನೆಯ ಸುದಿನ ಮನಸ್ಸಿನಲ್ಲಿ ಇದ್ದೇ ಇರುತ್ತದೆ. 'ಸ್ನೇಹ' ಎನ್ನುವ ಶಬ್ದವೇ ಅತ್ಯಂತ ಮಾಂತ್ರಿಕವಾಗಿದೆ. ಎಲ್ಲವನ್ನು ಹಂಚಿಕೊಳ್ಳುವುದು ಸ್ನೇಹಿತರೊಂದಿಗೆ ಮಾತ್ರ.

ಇಂಥಹ ಎಷ್ಟೋ ಜನಪದ ಗೀತೆಗಳಲ್ಲಿ, ಕಥೆಗಳಲ್ಲಿ, ಲಾವಣಿಗಳಲ್ಲಿ ಹೆಣ್ಣುಮಕ್ಕಳು ತಾವು ಹುಟ್ಟಿ ಆಡಿ ಬೆಳೆದ ತವರನ್ನು ಮತ್ತು ತಮ್ಮೊಡನೆ ಹುಟ್ಟಿದವರನ್ನು ತಮಗೆ ಜನ್ಮ ನೀಡಿದವರನ್ನು ಸದಾಕಾಲ ನೆನಪು ಮಾಡಿಕೊಳ್ಳುತ್ತಲೇ ಇರುತ್ತಾರೆ. ತಮ್ಮ ತವರಿಗೆ ಎಂದಾದರೂ ವಾಪಸ್ಸಾದಾಗ ಅಧಿಕಾರ ಚಲಾಯಿಸದೇ ಪ್ರೀತಿಯಿಂದಲೇ ಎಲ್ಲವನ್ನೂ ಪಡೆಯುವ ಬಾಂಧವ್ಯವು ಜನಪದ ಗೀತೆಗಳಲ್ಲಿ ಇರುವುದನ್ನು ನಾವು ಗಮನಿಸಿದ್ದೇವೆ.

ಯಾವುದೇ ಕಾವ್ಯವಾಗಲಿ, ಕಥೆಯಾಗಲಿ, ಅಥವಾ ಶಾಸನಗಳೇ ಆಗಲಿ ಅವು ಆ ಕಾಲದ ಬದುಕಿನ ಪ್ರತೀಕಗಳು. ಅಂದಿನ ಜನಜೀವನ ಮತ್ತು ಆಶೋತ್ತರಗಳನ್ನು ಅವು ಒಳಗೊಂಡಿರುತ್ತವೆ ಎಂಬುದು ಶಾಶ್ವತ ಸತ್ಯ. ಈ ಪ್ರಪಂಚದಲ್ಲಿ ಹಲವು ತರಹದ ಸಂಬಂಧಗಳೊಂದಿಗೆ ಹೆಣ್ಣಾಗಲಿ ಅಥವಾ ಗಂಡಾಗಲಿ ಬಾಂಧವ್ಯವನ್ನು ಇರಿಸಿಕೊಂಡು ಮುಂದುವರಿಯುತ್ತಿವೆ. ಅವುಗಳಲ್ಲಿ ನಾವು ಜನಜೀವನದ ಸೂಕ್ಷ್ಮ ಅರಿಯಬೇಕಾದುದು ಇದರ ಉದ್ದೇಶವಾಗಿದೆ.

ಕೊನೆಟಿಪ್ಪಣಿ:

- ಈ ಲೇಖನದಲ್ಲಿ ಬಳಸಿರುವ ಗೀತೆಗಳನ್ನು ಹಲಸಂಗಿ ಗೆಳೆಯರು ಸಂಗ್ರಹಿಸಿರುವ 'ಗರಗತಿಯ ಹಾಡು' ಗ್ರಂಥದಿಂದ ಆರಿಸಿದೆ (ಆವೃತ್ತಿ–1956).